## ಮಾಟಿ ತೊಡುವವರು ಹೀಗೆ ಮಾಡಿ

- ತುಂಬಾ ಗ್ರ್ಯಾಂಡಾಗಿರುವ ನಿಮ್ಮ ಉಡುಪಿಗೆ ಅದರ ಅಂದವನ್ನು ಹೆಚ್ಚಿಸಲು ಹೆವಿ ವರ್ಕ್ ಇರುವ ಮಾಟಿಯನ್ನು ದೊಡ್ಡದಾದ ಜುಮುಕಿ ಜೊತೆಗೆ ಧರಿಸಿ.
- ಹೇರ್ ಬನ್ ಧರಿಸುವುದರ ಜೊತೆಗೆ ಮಾಟಿ ಸಖತ್ತಾಗಿ ಮ್ಯಾಚ್ ಆಗುತ್ತದೆ.
- ಸಿಂಪಲ್ಲಾಗಿ ತುರುಬು ಕಟ್ಟಿ ಅದಕ್ಕೆ ಎರಡು ಅಥವಾ ಮೂರೆಳೆಯ ಮಾಟಿ ಧರಿಸುವುದರಿಂದ ನಿಮ್ಮ ಹೇರ್‌ಸ್ಟೈಲ್ ಚೆನ್ನಾಗಿ ಕಾಣುತ್ತದೆ.
- ಇತ್ತೀಚೆಗೆ ಮುತ್ತಿನ ಆಭರಣಗಳ ಟ್ರೆಂಡ್ ಜೋರಾಗಿದೆ. ಆದ್ದರಿಂದ ನಿಮ್ಮ ಮುತ್ತಿನ ಆಭರಣಗಳ ಜೊತೆಗೆ ಮುತ್ತಿನಿಂದ ಕೂಡಿದ ಮಾಟಿ ಸಖತ್ತಾಗಿ ಮ್ಯಾಚ್ ಆಗುತ್ತದೆ ಹಾಗೂ ನಿಮ್ಮ ಉಡುಪಿಗೆ ಗ್ರ್ಯಾಂಡ್ ಲುಕ್ ನೀಡುತ್ತದೆ.
- ನೀವು ಧರಿಸುವ ಮಾಟಿ ಚಿನ್ನ ಅಥವಾ ಬೆಳ್ಳಿಯದ್ದಾದರೆ ಪರವಾಗಿಲ್ಲ. ಮುತ್ತಿನಿಂದ ಕೂಡಿದ್ದರೆ ಅದನ್ನು ಆದಷ್ಟು ಪರ್‌ಫ್ಯೂಮ್ ಮತ್ತು ಮೇಕಪ್ ಸಾಧನಗಳಿಂದ ದೂರವಿಡಬೇಕು. ಪರ್‌ಫ್ಯೂಮ್‌ನಿಂದ ಮುತ್ತಿನ ಹೊಳಪು ಕಡಿಮೆಯಾಗುತ್ತದೆ ಮತ್ತು ಮುತ್ತಿನ ಮೇಲ್ಪದರು ಕಿತ್ತು ಹೋಗುವ ಸಂಭವ ಜಾಸ್ತಿ. ಬಳಸಿದ ಬಳಿಕ ಬಟ್ಟೆಯಲ್ಲಿ ಸುತ್ತಿಟ್ಟರೆ ಬಾಳಿಕೆ ಹೆಚ್ಚು.





ಸೌಂದರ್ಯವನ್ನು ನಿರ್ಧರಿಸುತ್ತದೆ. ಇತ್ತೀಚೆಗೆ ಫ್ಯಾಷನ್‌ಪ್ರಿಯರಾದ ಮಹಿಳೆಯರು ಒಂದು ಕಿವಿಯೋಲೆ ಬದಲಾಗಿ ಏಳೆಂಟು ಕಡೆ ಕಿವಿ ಚುಚ್ಚಿಸಿಕೊಂಡು ವಿವಿಧ ವಿನ್ಯಾಸದ ಕಿವಿಯೋಲೆ ಧರಿಸುತ್ತಿದ್ದಾರೆ. ಅದೇ ಇಂದಿನ ಫ್ಯಾಷನ್ ಟ್ರೆಂಡ್ ಎನಿಸಿದೆ. ಇಂದಿನ ಆಧುನಿಕ ಮಹಿಳೆಯರು ಸೀಸನ್‌ಗೆ ತಕ್ಕಂತೆ ಅಪ್‌ಡೇಟ್ ಆಗಲು ಬಯಸುತ್ತಿದ್ದಾರೆ. ಅವರ ಅಭಿರುಚಿಗೆ ತಕ್ಕಂತೆ ಫ್ಯಾಷನಿಸ್ಟ್‌ಗಳು ಕೂಡ ತರಹೇವಾರಿ ಕಿವಿಯೋಲೆಗಳನ್ನು ಮಾರುಕಟ್ಟೆಗೆ ತಂದಿದ್ದಾರೆ. ಇವುಗಳ ಸಾಲಿನಲ್ಲಿ ಇದೀಗ ಜುಮುಕಿಗಳ ಜೊತೆ ಧರಿಸುವ ಮಾಟಿ ಟ್ರೆಂಡ್ ಜೋರಾಗಿದೆ.

ಹಿಂದೆಲ್ಲಾ ಸಾಂಪ್ರದಾಯಿಕ ಆಭರಣಗಳ ಸಾಲಿನಲ್ಲಿದ್ದ ಮಾಟಿ ಇದೀಗ ಒಂದಷ್ಟು ಹೊಸ ವಿನ್ಯಾಸದೊಂದಿಗೆ ಹೆಣ್ಣು ಮಕ್ಕಳಿಗೆ ತೀರಾ ಹತ್ತಿರವಾಗುತ್ತಿದೆ. ಸಾಂಪ್ರದಾಯಿಕ ಮದುವೆ ಸಮಾರಂಭಗಳಲ್ಲಿ ಮದುಮಗಳಿಗೆ ತಲೆಯಿಂದ ಪಾದದವರೆಗೆ ಸಾಕಷ್ಟು ಸಾಂಪ್ರದಾಯಿಕ ಆಭರಣಗಳಿಂದ ಅಲಂಕರಿಸುವ ವಾಡಿಕೆ ಹಿಂದಿನಿಂದಲೂ ಪ್ರಚಲಿತವಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಮಾಂಗಟೀಕಾ, ವಿವಿಧ ವಿನ್ಯಾಸದ ಜಡೆ ಬಿಲ್ಲೆಗಳು, ನತ್ತು, ಕಾಲ್ಗೆಜ್ಜೆ, ಕಾಲುಂಗುರ, ಸಾಂಪ್ರದಾಯಿಕ ಬಳೆಗಳು... ಹೀಗೆ ಸಾಕಷ್ಟು ಸಾಂಪ್ರದಾಯಿಕ ಆಭರಣಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವುಗಳೆಲ್ಲದರ ಜೊತೆಗೆ ಕಿವಿಯಲ್ಲಿ ಧರಿಸುವ ದೊಡ್ಡದಾದ ಜುಮುಕಿಗಳ ಜೊತೆಗೆ ಅದರ ಅಂದವನ್ನು ಹೆಚ್ಚಿಸುವ ಮಾಟಿ ಧರಿಸಿದರಂತೂ ಮದುಮಗಳ ಸೌಂದರ್ಯಕ್ಕೆ ಸಾಟಿಯೇ ಇಲ್ಲ ಎನ್ನಬಹುದು.

ಸೆಲೆಬ್ರಿಟಿಗಳು ತಾವು ಹೋಗುವ ಸಭೆ, ಸಮಾರಂಭ, ಸಂದರ್ಶನಗಳಿಗೆ ದೊಡ್ಡ ಕಿವಿಯೋಲೆ ಜೊತೆಗೆ ಮಾಟಿ ಧರಿಸಿ ಫ್ಯಾಷನ್‌ಗೆ ಒಂದು ಹೊಸ ಆಯಾಮ ತಂದುಕೊಟ್ಟಿದ್ದಾರೆ. ಅದರಂತೆ ಮಾಟಿ ಹೊಸ ಫ್ಯಾಷನ್ ಆಗಿ ಮತ್ತೆ ಮರಳಿ ಫ್ಯಾಷನ್ ಲೋಕಕ್ಕೆ ರೀ ಎಂಟ್ರಿ ಕೊಟ್ಟಿದೆ. ಎಷ್ಟೋ ಜನ ತಮ್ಮ ಮದುವೆಯಲ್ಲಿ ಮಾಡಿಸಿದ ಮಾಟಿಗಳನ್ನು 'ಔಟ್ ಆಫ್ ಫ್ಯಾಷನ್' ಆಯ್ತು ಎಂದು ಕೊಟ್ಟು ಬೇರೆ ಆಭರಣ ಮಾಡಿಸಿದರೆ, ಅಂಥವರು ಇದೀಗ 'ಛೇ ನನ್ನ ಬಳಿಯಿದ್ದ ಮಾಟಿ ಕೊಡಬಾರದಿತ್ತು' ಎಂದು ಯೋಚಿಸುವ ರೀತಿಯಲ್ಲಿ ಮಾಟಿ ಫ್ಯಾಷನ್ ಮತ್ತೆ ಮರಳಿ ಬಂದಿದೆ.

ಜುಮುಕಿಗಳ ಜೊತೆಗೆ ಧರಿಸುವ ಮಾಟಿಗಳಲ್ಲಿ ಹಲವಾರು ವಿನ್ಯಾಸಗಳಿವೆ. ಬರೀ ಬಂಗಾರದ ಒಂದೆಳೆ ಸರಪಳಿ, ಎರಡೆಳೆ, ಮೂರೆಳೆ ಸರಪಳಿ ವಿನ್ಯಾಸ, ಸರಪಳಿಗಳ ಜೊತೆಗೆ ಮುತ್ತು, ಹವಳದ ಸಾಲು, ಸರಗಳ ಜೊತೆಗೆ ಚಿಕ್ಕ ಚಿಕ್ಕ ಜುಮುಕಿಗಳ ಸಾಲು, ಬರೀ ಬಿಳಿ ಮುತ್ತುಗಳಿಂದಲೇ ತಯಾರಿಸಿದ ಮಾಟಿಗಳು ಇವುಗಳ ಜೊತೆಗೆ ಇದೀಗ ಟ್ರೆಡಿಷನಲ್ ಟೆಂಪಲ್ ಡಿಸೈನ್‌ವುಳ್ಳ ಚಿಕ್ಕ ಚಿಕ್ಕ ಲಕ್ಷ್ಮಿ ಪೆಂಡೆಂಟ್‌ಗಳನ್ನು ಸರಗಳಲ್ಲಿ ಅಳವಡಿಸಿ ಅವುಗಳಿಗೆ ಒಂದು ಸಾಂಪ್ರದಾಯಿಕ ಲುಕ್ ಕೊಡುವ ವಿನ್ಯಾಸಕಾರರ ಕಲೆ ಅದ್ಭುತವೆಂದೇ ಹೇಳಬಹುದು. ಶುಭ ಸಮಾರಂಭಗಳು ಪ್ರಾರಂಭವಾದ ಮೇಲೆ ಕೇಳಬೇಕೆ? ಎಲ್ಲ ಮಹಿಳೆಯರೂ ತಾವು ಧರಿಸುವ ಗ್ರ್ಯಾಂಡ್ ಸೀರೆಗಳಿಗೆ ಗ್ರ್ಯಾಂಡಾಗಿರುವ ಆಭರಣಗಳನ್ನೇ ಆಯ್ದುಕೊಳ್ಳುತ್ತಾರೆ. ಅಂಥವರಿಗೆ ಈ ಮಾಟಿ ಹೇಳಿ ಮಾಡಿಸಿದ ಆಭರಣ.

ನೀವು ಧರಿಸುವ ಆಭರಣಗಳ ಸೆಟ್‌ಗೆ ಅನುಗುಣವಾಗಿ ಈ ಮಾಟಿ ಧರಿಸಬಹುದು. ಬರೀ ಚಿನ್ನದ ಆಭರಣಗಳನ್ನು ಧರಿಸುವವರು ಚಿನ್ನದ ಜುಮುಕಿ ಜೊತೆಗೆ ಬಂಗಾರದಲ್ಲೇ ಮಾಡಿದ ಮಾಟಿ ಧರಿಸಬಹುದು. ಮುತ್ತಿನ ಸೆಟ್ ಧರಿಸುವವರು ಅದಕ್ಕೆ ಮ್ಯಾಚ್ ಮಾಡಿ ಮುತ್ತಿನಿಂದ ಕೂಡಿದ ಮಾಟಿ ಧರಿಸಬಹುದು. ಹೀಗೆ ಸಾಕಷ್ಟು ಹೊಸ ಹೊಸ ವಿನ್ಯಾಸದ ಮಾಟಿಗಳನ್ನು ಮ್ಯಾಚ್ ಮಾಡಿ ಧರಿಸಬಹುದು. ಸಿಂಪಲ್ಲಾಗಿ ಡ್ರೆಸ್ ಮಾಡುವವರು ತಾವು ಧರಿಸುವ ಸಿಂಪಲ್ ಸೀರೆಗಳ ಜೊತೆ ಒಂದೆಳೆಯ ಮಾಟಿ ಧರಿಸಬಹುದು. ಆದರೆ ಇದೀಗ ಹೆಚ್ಚಾಗಿ ಮಹಿಳೆಯರು ಒಂದೆಳೆ ಮಾಟಿಗಿಂತ ಎರಡು ಮೂರೆಳೆಯ ಮಾಟಿ ಇಷ್ಟಪಡುತ್ತಿದ್ದಾರೆ. ಇದು ಈಗಿನ ಟ್ರೆಂಡ್ ಕೂಡ ಹೌದು.

ಈ ಮಾಟಿಯನ್ನು ಬರೀ ಸೀರೆ ಉಟ್ಟಾಗ ಮಾತ್ರವಲ್ಲ, ಗ್ರ್ಯಾಂಡ್ ಸಲ್ವಾರ್, ಗೌನ್ ಮೇಲೆ ಕೂಡ ಧರಿಸಬಹುದು. ಫಂಕ್ಷನ್‌ಗಳಲ್ಲಿ ತಮ್ಮ ಉಡುಪುಗಳ ಜೊತೆಗೆ ಮಾಟಿಯಲ್ಲಿ ಯಾರೂ ಸಿಂಪಲ್ ಡಿಸೈನ್ ಇಷ್ಟಪಡುತ್ತಿಲ್ಲ. ಇತ್ತೀಚೆಗೆ ಬರೀ ಚಿನ್ನ ಮಾತ್ರವಲ್ಲ, ಬೆಳ್ಳಿ ಹಾಗೂ ಗೋಲ್ಡ್ ಪ್ಲೇಟೆಡ್, ಸಿಲ್ವರ್ ಪ್ಲೇಟೆಡ್ ಮಾಟಿಗಳೂ ಮಾರುಕಟ್ಟೆಯಲ್ಲಿ ಬಂದಿವೆ. ನೀವು ಧರಿಸುವ ಉಡುಪಿಗೆ ಅನುಗುಣವಾಗಿ ಗ್ರ್ಯಾಂಡ್ ಲುಕ್ ನೀಡುವ ಈ ತರಹೇವಾರಿ ಮಾಟಿಗಳು ಇಂದಿನ ಕಾಲಕ್ಕೆ ಸೂಕ್ತವೆನಿಸಿವೆ. ■